ಮಕ್ಕಳಲ್ಲಿ ಸಂಗಣ್ಣ ಕೊನೆಯವನಾಗಿದ್ದ. ಮೊದಲಿನ ಮೂರು ಮಕ್ಕಳು ವಿದ್ಯಾಭ್ಯಾಸಕ್ಕೆ ಎಳ್ಳುನೀರು ಬಿಟ್ಟು ವ್ಯವಸಾಯದಲ್ಲಿ ಅಪ್ಪನಿಗೆ ಜೊತೆಯಾಗಿದ್ದರು. ಅಷ್ಟಿಷ್ಟು ಓದು ತಲೆಗೆ ಹತ್ತಿದ್ದ ಸಂಗಣ್ಣನಿಗೆ ಹೊಲದಲ್ಲಿ ಚಾಕರಿ ಮಾಡುವುದು ಇಷ್ಟವಿರಲಿಲ್ಲ. ಪಿಯುಸಿಯಲ್ಲಿ ಆರ್ಡಿನರಿ ಪಾಸಾಗಿ ಕಾಲೇಜಿಗೆ ಕೈಮುಗಿದು ‘ಕ್ರಾಂತಿ’ ಪತ್ರಿಕೆ ಸೇರಿಕೊಂಡಿದ್ದ. ಕಂಪ್ಯೂಟರ್ ಪತ್ರಿಕಾ ಕ್ಷೇತ್ರಕ್ಕೆ ಕಾಲಿಟ್ಟಿರದ ಆ ದಿನಗಳಲ್ಲಿ ಹತ್ತು ವರ್ಷಗಳ ಕಾಲ ಅಕ್ಷರಗಳ ಮೊಳೆ ಜೋಡಿಸುತ್ತಾ, ಪತ್ರಿಕಾ ಬರವಣಿಗೆಯ ಎಲ್ಲ ಪಟ್ಟುಗಳನ್ನು ಕರಗತ ಮಾಡಿಕೊಂಡಿದ್ದ. ಮುಂದೆ ಕರೆಸ್ಪಾಂಡೆನ್ಸ್‌ನಲ್ಲಿ ಜರ್ನಲಿಸಂ ಶಿಕ್ಷಣ ಪಡೆದು ಕ್ರಾಂತಿಯಿಂದ ಹೊರಬಂದು ತನ್ನದೇ ‘ಸುಂಟರಗಾಳಿ’ ಪತ್ರಿಕೆ ಆರಂಭಿಸಿದ. ಅಂದಿನಿಂದ ಅವನು ‘ಗಾಳಿಸಂಗಣ್ಣ’ ಎಂದೇ ಖ್ಯಾತನಾದ. ‘ಸುಂಟರಗಾಳಿ’ಯ ಪ್ರತಿಯನ್ನು ಬಗಲಲ್ಲಿಟ್ಟುಕೊಂಡು ಸರ್ಕಾರಿ ಕಚೇರಿಗಳಿಗೆ ಅಲೆಯುವುದನ್ನು ಗಾಳಿಸಂಗಣ್ಣ ದಿನನಿತ್ಯದ ಕಾಯಕ ಮಾಡಿಕೊಂಡಿದ್ದ. ಅವನ ಬಗಲಲ್ಲಿರುತ್ತಿದ್ದ ಪತ್ರಿಕೆಗೆ ಅಂಜಿ ಸರ್ಕಾರಿ ಅಧಿಕಾರಿಗಳು ಒಂದಿಷ್ಟು ಚಂದಾ ಎತ್ತಿ ಕೊಡುತ್ತಿದ್ದರು. ಗಾಳಿಸಂಗಣ್ಣ, ‘ಸುಂಟರಗಾಳಿ’ ಎದುರಿಗಿಟ್ಟುಕೊಂಡು ಹಫ್ತಾ ವಸೂಲಿ ಮಾಡುತ್ತಿದ್ದ ಸಂಗತಿ ಗುಟ್ಟಾಗೇನೂ ಉಳಿದಿರಲಿಲ್ಲ. ಊರಿಗೆ ಬಂದಾಗಲೆಲ್ಲ ಮಠಕ್ಕ ಭೇಟಿ ನೀಡಿ ಅಪಗೊಳ ಪಾದಕ್ಕ ಹಣೆಹಚ್ಚಿ ‘ಬುದ್ದಿ ಬಾಂಬೆ ಪ್ರವಚನ ಯಾವಾಗ’ ಎಂದು ಕುಚೇಷ್ಟೆ ಮಾಡುತ್ತಿದ್ದ. ಅಪಗೊಳಿಗಿ ಅರ್ಥ ಆಗಿ ತಮ್ಮ ಖಾಸಗಿ ಕೋಣೆಯಲ್ಲಿದ್ದ ತಿಜೋರಿಯಿಂದ ಐನೂರರ ಹತ್ತೋ, ಇಪ್ಪತ್ತೋ ನೋಟುಗಳನ್ನು ಕಲ್ಲುಸಕ್ಕರೆ ಮತ್ತು ಎರಡು ಸೇವಂತಗಿ ಹೂವಿನ ಜೊತೆ ಸೇರಿಸಿ ಆಶೀರ್ವಾದದ ರೂಪದಲ್ಲಿ ಗಾಳಿಸಂಗಣ್ಣನ ಕೈಗೆ ಹಾಕುತ್ತಿದ್ದರು. ಮುಂಬೈನಲ್ಲಿ ಅಪಗೊಳು ಆಡಿದ ಆಟದ ಎಲ್ಲ ಭಂಗಿಗಳನ್ನು ಗಾಳಿಸಂಗಣ್ಣನ ಕ್ಯಾಮೆರಾ ಸೆರೆ ಹಿಡಿದಿತ್ತು. ಸರ್ಕಾರಿ ಅಧಿಕಾರಿಗಳನ್ನು ಮಠಾಧಿಪತಿಗಳನ್ನು ಹೆದರಿಸಿ ಹಣ ವಸೂಲಿ ಮಾಡಿ ಗಾಳಿಸಂಗಣ್ಣ ಊರಿನಲ್ಲಿ ದೊಡ್ಡಮನೆ ಕಟ್ಟಿಸಿದ್ದ.



ಬಿರುಗಾಳಿಯಂತಿದ್ದ ಗಾಳಿಸಂಗಣ್ಣ ಧೀರೇಂದ್ರ ಗೌಡನ ಮಗನ ಪ್ರೇಮಪ್ರಕರಣದ ವರದಿ ಪ್ರಕಟಿಸಿ ತುಸು ಮೆತ್ತಗಾಗಿದ್ದ. ಧೀರೇಂದ್ರ ಗೌಡನ ಮಗನಿಂದ ತನ್ನ ಮಗಳಿಗಾದ ಅನ್ಯಾಯಕ್ಕಾಗಿ ನ್ಯಾಯ ಕೊಡಿಸುವಂತೆ ಮಾದ, ಬಸವರಾಜಪ್ಪನಲ್ಲಿ ಮೊರೆ ಹೋಗಿದ್ದ. ಮಾದನ ಮಗಳಿಗೆ ನ್ಯಾಯ ಕೊಡಿಸುವಂತೆ ಬಸವರಾಜಪ್ಪ, ಗಾಳಿಸಂಗಣ್ಣನಲ್ಲಿ ಕೇಳಿಕೊಂಡಿದ್ದ. ತನ್ನ ಪತ್ರಿಕೆಯಲ್ಲಿ ವಿವರವಾಗಿ ವರದಿ ಪ್ರಕಟಿಸುವುದಾಗಿ ಗಾಳಿಸಂಗಣ್ಣ ಭರವಸೆ ಕೊಟ್ಟಿದ್ದ. ಮರುದಿನ ಪತ್ರಿಕೆಯಲ್ಲಿ ಪ್ರಕಟವಾದ ವರದಿಯಲ್ಲಿ ಎಲ್ಲಾ ಉಲ್ಟಾ ಆಗಿತ್ತು. ಹಣ ದೋಚುವುದಕ್ಕಾಗಿ ಮಾದ ಮತ್ತು ಅವನ ಮಗಳು ಹೂಡಿದ ನಾಟಕ ಇದೆಂದು ಬರೆದಿದ್ದ. ‘ಪ್ರೇಮ್ ಕಹಾನಿ: ಹಣ ದೋಚುವ ಮೋಹಿನಿ’ ಎಂದು ವರದಿಗೆ ಥೇಟ್ ಕಂಪನಿ ನಾಟಕಗಳ ಹೆಸರಿನಂತೆ ಹೆಡ್ಡಿಂಗ್ ನೀಡಿದ್ದ. ಧೀರೇಂದ್ರ ಗೌಡ ಕುಮಸಿ ಮತ್ತು ಸುತ್ತಮುತ್ತಲಿನ ಎಲ್ಲ ಹತ್ತು ಹಳ್ಳಿಗಳಿಗೆ ಪತ್ರಿಕೆಯ ಪ್ರತಿಗಳನ್ನು ಪುಕ್ಕಟ್ಟೆ ಹಂಚಿದ್ದ. ವರದಿ ಓದಿದ್ದೇ ಬಸವರಾಜಪ್ಪನಿಗೆ ಗಾಳಿಸಂಗಣ್ಣನ ಮೇಲೆ ನಖಾಶಿಖಾಂತ ಸಿಟ್ಟು ಬಂತು. ನೇರ ಪತ್ರಿಕೆಯ ಕಚೇರಿಗೆ ಹೋಗಿ ಮಾನನಷ್ಟ ಮೊಕದ್ದಮೆ ಹೂಡುವುದಾಗಿ ಬೆದರಿಸಿದ. ಹೆದರಿದ ಗಾಳಿಸಂಗಣ್ಣ ಮರುದಿನದ ಪತ್ರಿಕೆಯಲ್ಲಿ ಮಾದನ ಕ್ಷಮೆ ಕೋರಿ ತನ್ನ ಹೇಳಿಕೆ ಪ್ರಕಟಿಸಿದ್ದ. ತನಗಾದ ಅವಮಾನಕ್ಕಾಗಿ ಬಸವರಾಜಪ್ಪನ ಮೇಲೆ ಸೇಡು ತೀರಿಸಿಕೊಳ್ಳಲು ಸಮಯ ಸಂದರ್ಭಕ್ಕಾಗಿ ಕಾಯುತ್ತಿದ್ದವನಿಗೆ ದೇವಸ್ಥಾನದ ಸ್ಥಾಪನೆ ಸುವರ್ಣ ಅವಕಾಶವನ್ನೇ ಒದಗಿಸಿತ್ತು. ಅದಕ್ಕೆಂದೇ ‘ಸುಂಟರಗಾಳಿ’ಯಲ್ಲಿ ಊರಿನ ಅಭಿವೃದ್ಧಿಗೆ ಗುಡಿ ಮತ್ತು ಕಲ್ಯಾಣಮಂಟಪದ ಅಗತ್ಯ ಕುರಿತು ವಿವರಿಸಿ ಬರೆದಿದ್ದ. ಎಂ.ಎಲ್.ಎ. ಅಂದಾನಪ್ಪಗೌಡರು